KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

Tele: 0836-2215224
e-mail: academic.st@kud.ac.in
Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. No.KU/Aca(S&T)/RPH-382/2020-21/ 1099 Date: 21 JUL 2021

**ಪರಿಷ್ಕೃತ ಸುತ್ತೋಲೆ**

ವಿಷಯ: 2020-21ರ ಸ್ನಾತಕೋತ್ತರ (ಪಿ.ಜಿ) ಕೋರ್ಸುಗಳ ಪರಿಷ್ಕೃತ ಶೈಕ್ಷಣಿಕ ವೇಳಾಪಟ್ಟಿಯನ್ನು ಹೊರಡಿಸು ಬಗ್ಗೆ.

ಉಲ್ಲೇಖ:
1. ಸುತ್ತೋಲೆ ಸಂ. KU/Aca(S&T)/RPH-382/ PGCE/2020-21/842 ದಿ.09.05.2021.
2. ಎಲ್ಲಾ ನಿಖಾಯದ ಡೀನರು ಸಭೆಯ ದಿನಾಂಕ: 16.06.2021.
3. ಎಲ್ಲ ಪ್ರಾಚಾರ್ಯರ ಸಭೆಯ ದಿನಾಂಕ 17.06.2021.
4. ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆ ದಿನಾಂಕ 21.06.2021.
5. ಸುತ್ತೋಲೆ ಸಂ. KU/Aca(S&T)/RPH-382/ PGCE/2020-21/1091 ದಿ.22.06.2021.
6. ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ದಿನಾಂಕ 21.07.2021.
7. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 21.07.2021

\-\-\-\-\-\-

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಇತ್ತೀಚಿನ ಕೋವಿಡ್ ಲಾಕ್‌ಡೌನ್ ಪರಿಸ್ಥಿತಿಯಿಂದಾಗಿ ಶೈಕ್ಷಣಿಕ ಚಟುವಟಿಕೆಗಳಲ್ಲಾಗಿರುವ ವ್ಯತ್ಯಯಗಳನ್ನು ಸರಿಪಡಿಸಿಕೊಂಡು ಸಾಧ್ಯವಾದಷ್ಟು ರಾಜ್ಯಾದ್ಯಂತ ಏಕರೂಪತೆಯ ಶೈಕ್ಷಣಿಕ ಚಟುವಟಿಕೆಗಳ ವೇಳಾಪಟ್ಟಿಯನ್ನು ಸಿದ್ಧಪಡಿಸುವ ಸಲುವಾಗಿ ಜುಲೈ 2021ರಂದು ಯು.ಜಿ.ಸಿ ನೀಡಿದ ಮಾರ್ಗಸೂಚಿಗಳ ಆಧಾರದ ಮೇಲೆ ದಿನಾಂಕ. 19.07.2021ರಂದು ಮಾನ್ಯ ಉಪಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡದ ವರ್ಚುವಲ್ ಸಭೆಯಲ್ಲಿ ಕೆಲವು ನಿರ್ದೇಶನಗಳು ನೀಡಲ್ಪಟ್ಟಿರುತ್ತವೆ. ಈ ಹಿನ್ನಲೆಯಲ್ಲಿ ಎಲ್ಲ ನಿಖಾಯದ ಡೀನರು, ಮುಖ್ಯಸ್ಥರು ಮತ್ತು ಪ್ರಾಚಾರ್ಯರೊಂದಿಗೆ ಸಭೆಗಳನ್ನು ನಡೆಸಿ ಸಲಹೆಗಳನ್ನು ಪಡೆದು ಪ್ರಸ್ತಾವನೆ ಸಿದ್ಧಪಡಿಸಿ ಸದರಿ ಪ್ರಸ್ತಾವನೆಗೆ ವಿದ್ಯಾವಿಷಯಕ ಪರಿಷತ್‌ನ ಅನುಮೋದನೆಯೊಂದಿಗೆ 2020-21ನೇ ಸಾಲಿಗೆ ಪರಿಷ್ಕೃತ ಶೈಕ್ಷಣಿಕ ವೇಳಾಪಟ್ಟಿಯನ್ನು ಸಿದ್ಧಪಡಿಸಿ ಈ ಸುತ್ತೋಲೆಯೊಂದಿಗೆ ಲಗತ್ತಿಸಿ ನೀಡುತ್ತಾ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು / ನಿರ್ದೇಶಕರು / ಸಂಯೋಜಕರು / ಸ್ನಾತಕೋತ್ತರ ಕೇಂದ್ರಗಳ ಆಡಳಿತಾಧಿಕಾರಿಗಳು ಸ್ನಾತಕೋತ್ತರ ಕೊರ್ಸುಗಳನ್ನು ನಡೆಸುತ್ತಿರುವ ಪ್ರಾಚಾರ್ಯರುಗಳಿಗೆ ಪರಿಷ್ಕೃತ ಶೈಕ್ಷಣಿಕ ವೇಳಾಪಟ್ಟಿಯನ್ನು ಅನುಷ್ಠಾನಗೊಳಿಸಲು ಹಾಗೂ ಈ ವಿವರಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸಲು ಎಲ್ಲಾ ಅಗತ್ಯ ಕ್ರಮವಹಿಸುವಂತೆ ಈ ಮೂಲಕ ಸೂಚಿಸಿದೆ. ಹಾಗೇ ಈ ಅವಧಿಯಲ್ಲಿ ಕೋವಿಡ್-19ರ ಮಾರ್ಗಸೂಚಿಗಳನ್ನು (SOP) ಕಡ್ಡಾಯವಾಗಿ ಪಾಲಿಸಲು ಅಗತ್ಯಕ್ರಮ ವಹಿಸಲು ತಿಳಿಯಪಡಿಸಿದೆ.

21/07/2021

**ಅಡಕ: ಪರಿಷ್ಕೃತ ಶೈಕ್ಷಣಿಕ ವೇಳಾಪಟ್ಟಿ**

(ಡಾ. ಹನುಮಂತಪ್ಪ ಕೆ.ಟಿ)
ಕುಲಸಚಿವರು

**ಗೆ,**

ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳು / ನಿರ್ದೇಶಕರು / ಸಂಯೋಜಕರು / ಆಡಳಿತಾಧಿಕಾರಿಗಳು (ಗದಗ, ಹಾವೇರಿ ಹಾಗೂ ಕಾರವಾರ) / ಕ.ವಿ.ವಿ. ವ್ಯಾಪ್ತಿಯಲ್ಲಿ ಬರುವ ಸ್ನಾತಕೋತ್ತರ ವಿಷಯಗಳಿಗೆ ಸಂಬಂಧಪಟ್ಟ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು.

**ಪ್ರತಿ ಸಾದರಪೂರ್ವಕವಾಗಿ:**

1. ಕುಲಸಚಿವರು (ಮೌಲ್ಯಮಾಪನ) ಕವಿವಿ, ಧಾರವಾಡ
2. ಹಣಕಾಸು ಅಧಿಕಾರಿಗಳು, ಕವಿವಿ, ಧಾರವಾಡ.
3. ಎಲ್ಲ ನಿಖಾಯದ ಡೀನರು, ಕವಿವಿ, ಧಾರವಾಡ ಇವರ ಮಾಹಿತಿಗಾಗಿ
4. ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ, ಕಾಲೇಜು ಅಭಿವೃದ್ಧಿ ಮಂಡಳಿ, ಕ್ರೀಡಾ ವಿಭಾಗ, ಪ್ರಸಾರಂಗ ವಿಭಾಗ, ಕವಿವಿ. ಧಾರವಾಡ.
5. ಉಪನಿರ್ದೇಶಕರು, ಕಾಲೇಜಿಯೇಟ್ ಎಜ್ಯುಕೇಶನ / ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಜಿಲ್ಲೆ, ಧಾರವಾಡ.
6. ಸಂಯೋಜಕರು,ಎನ್.ಸಿ.ಸಿ. / ಎನ್.ಎಸ್.ಎಸ್. ಅಧಿಕಾರಿಗಳು,: ಧಾರವಾಡ, ಹುಬ್ಬಳ್ಳಿ, ಮತ್ತು ಕಾರವಾರ ಜಿಲ್ಲೆ ಸಂಪಾದಕರು, ವಿಶ್ವವಿದ್ಯಾಲಯ, ಬುಲೆಟಿನ, ಕವಿವಿ, ಧಾರವಾಡ.
7. ವಿಶೇಷ ಅಧಿಕಾರಿಗಳು: ಪ್ರವರ್ಗ-1 ಘಟಕ,/ಸಿ.ಡಿ.ಸಿ, ಕವಿವಿ, ಧಾರವಾಡ.
8. ನಿರ್ದೇಶಕರು, ಐ.ಟಿ. ಶಾಖೆ, ಪರೀಕ್ಷಾ ವಿಭಾಗ, ಕವಿವಿ, ಧಾರವಾಡ ಇವರಿಗೆ ಮಾಹಿತಿಗಾಗಿ. ಸದರ ಪ್ರವೇಶ ನಿಯಮಾವಳಿಯ ಅಧಿಸೂಚನೆ ಪುಸ್ತಿಕೆಯನ್ನು ಕವಿವಿ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.

**ಪ್ರತಿ ಮಾಹಿತಿಗಾಗಿ:**

1. ಅಧೀಕ್ಷಕರು, ಪರೀಕ್ಷಾ (ಜಿಎಡಿ) / ಹಣಕಾಸು (Receipts Section) / ವಿದ್ಯಾಮಂಡಳ (ಪಿಜಿ:ಸಿಆರಟಿ) / ಕಾಲೇಜು ಅಭಿವೃದ್ಧಿ ಮಂಡಳಿ (ಸಂಯೋಜನೆ) / ಸಿಂಡಿಕೇಟ / ಕಲಾ / ವಿಜ್ಞಾನ / ವಾಣಿಜ್ಯ / ಕಾನೂನು / ಮ್ಯಾನೇಜಮೆಂಟ್ / ಶಿಕ್ಷಣ / ಗೌಪ್ಯ / ಪ್ರಶ್ನೆ ಪತ್ರಿಕೆ ವಿಭಾಗ, ಕವಿವಿ, ಧಾರವಾಡ.
2. ಕುಲಪತಿಗಳ / ಕುಲಸಚಿವರ / ಕುಲಸಚಿವರು (ಮೌಲ್ಯಮಾಪನ) ಇವರ ಆಪ್ತಕಾರ್ಯದರ್ಶಿಗಳು, ಕವಿವಿ, ಧಾರವಾಡ.

# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ವಿಷಯ:** 2020–21ನೇ ಶೈಕ್ಷಣಿಕ ಸಾಲಿನ ಎಲ್ಲ ಸ್ನಾತಕೋತ್ತರ ಪದವಿ / ಪಿ.ಜಿ. ಡಿಪ್ಲೋಮಾ (ಎಂ.ಬಿ.ಎ. / **ಎಂ.ಸಿ.ಎ / ಎಲ್.ಎಲ್.ಎಂ. / ಬಿ.ಪಿ.ಎಡ್ ಸಹಿತ**) ಕೋರ್ಸಗಳಿಗೆ 2 ರಿಂದ 6ನೇ ಸೆಮಿಸ್ಟರ್ / ನಾನ್ ಸೆಮಿಸ್ಟರ್‌ವರೆಗಿನ ಎರಡನೇ ಟರ್ಮಗಳಿಗೆ ಸಿದ್ದಪಡಿಸಿದ ಶೈಕ್ಷಣಿಕ ವೇಳಾಪಟ್ಟಿ.

-----

ಮಾನ್ಯ ಕುಲಪತಿಗಳ ಆದೇಶದ ಮೇರೆಗೆ 2020–21ನೇ ಸಾಲಿನ ಸ್ನಾತಕೋತ್ತರ ಪದವಿ/ ಪಿ.ಜಿ. ಡಿಪ್ಲೋಮಾ ಕೋರ್ಸಿನ ಪುನರ್ ಪರಿಷ್ಕೃತ ಶೈಕ್ಷಣಿಕ ವೇಳಾಪಟ್ಟಿಯು ಈ ಕೆಳಗಿನಂತೆ ಇರುತ್ತದೆ:

**2020–21ನೇ ಸಾಲಿನ ಸ್ನಾತಕೋತ್ತರ ಪದವಿ/ ಪಿ.ಜಿ. ಡಿಪ್ಲೋಮಾ ಮತ್ತು ಎಂ.ಬಿ.ಎ. / ಎಂ.ಸಿ.ಎ / ಎಲ್.ಎಲ್.ಎಂ. / ಬಿ.ಪಿ.ಎಡ್ ಸಹಿತ ಪದವಿ ಕೋರ್ಸಿನ ಪರಿಷ್ಕೃತ ಶೈಕ್ಷಣಿಕ ವೇಳಾಪಟ್ಟಿ**

| ಕ್ರ. ಸಂ. | ವಿವರ | ದಿನಾಂಕ |
|---|---|---|
| 1 | **2, 4 ಹಾಗೂ 6ನೇ ಸೆಮಿಸ್ಟರ್ / ನಾನ್ ಸೆಮಿಸ್ಟರ್ ಎರಡನೇ ಟರ್ಮಿನ ತರಗತಿಗಳ ಹಾಗೂ ಅಧ್ಯಾಪಕರ ಕೆಲಸದ ಪ್ರಾರಂಭದ ದಿನಾಂಕ**<br>(90 days including Sunday & Holidays) | **17.05.2021** |
| 2 | i. ಆಫ್‌ಲೈನ್ ಮುಖಾಂತರ ಥಿಯರಿ ವಿಷಯದ ತರಗತಿಗಳ ಪುನರಾವಲೋಕನ / ಪ್ರಯೋಗಾಲಯ ತರಗತಿಗಳ ಶೈಕ್ಷಣಿಕ ಚಟುವಟಿಕೆ.<br>ii. ಥಿಯರಿ ಮತ್ತು ಪ್ರಾಯೋಗಿಕ ವಿಷಯಗಳ ಆಂತರಿಕ ಪರೀಕ್ಷೆಗಳು (ಎಲ್ಲಾ ಸಮ ಸೆಮಿಸ್ಟರ್‌ಗಳಾದ 2, 4 ಹಾಗೂ 6ನೇ ಸೆಮಿಸ್ಟರ್‌ಗಳಿಗೆ)<br>iii. 4 ಅಥವಾ 6ನೇ ಸೆಮಿಸ್ಟರ್‌ಗಳ ವಿಶ್ವವಿದ್ಯಾಲಯದ ಪ್ರಾಯೋಗಿಕ ಪರೀಕ್ಷೆಗಳ ದಿನಾಂಕದ ಅವಧಿ<br>**iv.** ಸಂಬಂಧಪಟ್ಟ ಸ್ನಾತಕೋತ್ತರ ಪದವಿಗಳ ಅಂತಿಮ ಸೆಮಿಸ್ಟರ್‌ಗಳಾದ ***4 ಅಥವಾ 6ನೇ ಸೆಮಿಸ್ಟರ್‌ಗಳ ಪ್ರಾಯೋಗಿಕ ಪರೀಕ್ಷೆಗಳನ್ನು ಆಯಾ ವಿಭಾಗದ / ಮಹಾವಿದ್ಯಾಲಯಗಳ ಮಟ್ಟದಲ್ಲಿ ವೇಳಾಪಟ್ಟಿ ತಯಾರಿಸಿ ಕೇವಲ ಆಂತರಿಕ ಪರೀಕ್ಷಕರಿಂದ ಪರೀಕ್ಷೆಗಳನ್ನು ಜರುಗಿಸಿ ವಿಶ್ವವಿದ್ಯಾಲಯಕ್ಕೆ ಅಂಕಗಳನ್ನು ಒದಗಿಸುವುದು.*** | **26.07.2021**<br>ರಿಂದ<br>**07.08.2021** |
| 3 | **2, 4 ಹಾಗೂ 6ನೇ ಸೆಮಿಸ್ಟರ್ / ನಾನ್ ಸೆಮಿಸ್ಟರ್ ಎರಡನೇ ಟರ್ಮಿನ ತರಗತಿಗಳ ಹಾಗೂ ಅಧ್ಯಾಪಕರ ಕೆಲಸದ ಕೊನೆಯ ದಿನಾಂಕ** | **07.08.2021** |
| 4 | **1, 3 ಹಾಗೂ 5ನೇ ಸೆಮಿಸ್ಟರ್ ಬೆಸ ಸೆಮಿಸ್ಟರ್ ಪರೀಕ್ಷೆಗಳಿಗಾಗಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಪೂರ್ವ ತಯಾರಿಯ ಅವಧಿ (ಎಲ್ಲಾ ಬೆಸ ಸೆಮಸ್ಟರ್) ಶಿಕ್ಷಕರ ಹಾಜರಾತಿ ಅಗತ್ಯವಿರುತ್ತದೆ.** | **08.08.2021**<br>ರಿಂದ<br>**15.08.2021** |
| 5 | **1, 3 ಹಾಗೂ 5ನೇ ಸೆಮಿಸ್ಟರ್ ಬೆಸ ಸೆಮಿಸ್ಟರ್ ಪರೀಕ್ಷೆ ಆಫ್‌ಲೈನ್ ಮುಖಾಂತರ**<br>**ವಿ.ಸೂ.:** ಪರೀಕ್ಷಾ ಅವಧಿಯಲ್ಲಿ ಅಧ್ಯಾಪಕರು ಪರೀಕ್ಷಾ ಕಾರ್ಯವನ್ನು ಕಡ್ಡಾಯವಾಗಿ ನಿರ್ವಹಿಸುವುದು. | **16.08.2021**<br>ರಿಂದ<br>**31.08.2021** |
| 6 | 4 ಹಾಗೂ 6ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪರೀಕ್ಷಾ ಪೂರ್ವ ತಯಾರಿಯ ಅವಧಿ (ಸಮ ಸೆಮಸ್ಟರ್)<br>i. ಎರಡು ವರ್ಷದ ಅವಧಿಯ ಪದವಿ ತರಗತಿಗಳಿಗೆ 4ನೇ ಸೆಮಿಸ್ಟರ್‌ಗೆ ಮಾತ್ರ ಪರೀಕ್ಷೆಗಳು<br>ii. ಮೂರು ವರ್ಷದ ಅವಧಿಯ ಪದವಿ ತರಗತಿಗಳಿಗೆ 6ನೇ ಸೆಮಿಸ್ಟರ್‌ಗೆ ಮಾತ್ರ ಪರೀಕ್ಷೆಗಳು<br>**ವಿ.ಸೂ:**<br>i. ಎರಡು ವರ್ಷದ ಅವಧಿಯ ಸ್ನಾತಕೋತ್ತರ ಪದವಿ ತರಗತಿಗಳಿಗೆ 2ನೇ ಸೆಮಿಸ್ಟರ್ ಪರೀಕ್ಷೆಗಳು ಇರುವುದಿಲ್ಲ. ಸರ್ಕಾರದ ನಿಯಮಾವಳಿಗಳ / ಯುಜಿಸಿ ಮಾರ್ಗಸೂಚಿ ಎಪ್ರಿಲ್ 2020ರ ಪ್ರಕಾರ ಫಲಿತಾಂಶವನ್ನು ಪ್ರಕಟಿಸಲಾಗುವುದು.<br>ii. ಮೂರು ವರ್ಷದ ಅವಧಿಯ ಸ್ನಾತಕೋತ್ತರ ಪದವಿ ತರಗತಿಗಳಿಗೆ 2 ಮತ್ತು 4ನೇ ಸೆಮಿಸ್ಟರ್ ಪರೀಕ್ಷೆಗಳು ಇರುವುದಿಲ್ಲ. ಸರ್ಕಾರದ ನಿಯಮಾವಳಿಗಳ ಪ್ರಕಾರ ಫಲಿತಾಂಶವನ್ನು ಪ್ರಕಟಿಸಲಾಗುವುದು. | **01.09.2021**<br>ರಿಂದ<br>**14.09.2021** |
| 7 | **ಅಧ್ಯಾಪಕರಿಗೆ ಸೂಚನೆ:** ಎಲ್ಲ ಬೆಸ ಸೆಮಿಸ್ಟರ್‌ಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನದ ಕೊನೆಯ ದಿನಾಂಕ | **14.09.2021** |
| 8 | **ಈ ಮೇಲಿನಂತೆ ಸಂಬಂಧಪಟ್ಟ 4 ಹಾಗೂ 6ನೇ** (Even Semester) **ಸಮ ಸೆಮಿಸ್ಟರ್ ಪರೀಕ್ಷೆ ಆಫ್‌ಲೈನ್ ಮುಖಾಂತರ**<br>ವಿ.ಸೂ.: ಪರೀಕ್ಷಾ ಅವಧಿಯಲ್ಲಿ ಅಧ್ಯಾಪಕರು ಪರೀಕ್ಷಾ ಕಾರ್ಯವನ್ನು ಕಡ್ಡಾಯವಾಗಿ ನಿರ್ವಹಿಸುವುದು. | **15.09.2021**<br>ರಿಂದ<br>**30.09.2021** |
| 9 | ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭ: 2021–22 | **01.10.2021** |

21/07/21

ಕುಲಸಚಿವರು